ಶ್ರೀ ಬಾಬುರೆಡ್ಡಿ ವಿ. ತುಂಗಳ್.— (ಶ್ರೀ ಟಿ. ಎಂ. ಇದಿನಬ್ಬ ಅವರ ಪರವಾಗಿ).—

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಕಷ್ಟು ಸಹಕಾರ ಸಂಘಗಳಲ್ಲಿ ದುರುಪಯೋಗ ಆಗಿದೆ ಎಂದು ಹೇಳಿದ್ದೀರಿ. ೧ ಕೋಟಿ ರೂಪಾಯಿಗೂ ಮೇಲ್ಪಟ್ಟು ದುರುಪಯೋಗ ಆಗಿದೆ ಎಂದು ಹೇಳಿದ್ದೀರಿ. ಈ ರೀತಿ ಹಣ ದುರುಪಯೋಗ ಮಾಡುವಂಥ ಸಹಕಾರ ಸಂಘಗಳ ಬಗ್ಗೆ ಕಟ್ಟುನಿಟ್ಟಾದ ಕ್ರಮ ತೆಗೆದುಕೊಳ್ಳುತ್ತೀರಾ ? ಈಗ ದುರುಪಯೋಗ ಮಾಡಿರುವ ಸಹಕಾರ ಸಂಘಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಚ್. ಏಕಾಂತಯ್ಯ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಹೇಳಿದ್ದೇನೆ. ಎಲ್ಲೆಲ್ಲಿ ದುರುಪಯೋಗದ ಆಪಾದನೆಗಳಿವೆ, ಎಲ್ಲಿ ಕ್ರಿಮಿನಲ್ ಪ್ರೊಸೀಡಿಂಗ್ಸ್ ತೆಗೆದುಕೊಳ್ಳುವುದಕ್ಕೆ ಆರ್ಹವಾಗಿವೆ ಅಂಥ ಸಂದರ್ಭದಲ್ಲಿ ಕ್ರಮ ತೆಗೆದುಕೊಂಡಿದ್ದೇವೆ. ಉಳಿದ ಪ್ರಕರಣಗಳಲ್ಲಿ ಪರಿಶೀಲಿಸಿ ಎಲ್ಲಿ ಪ್ರೈಮಾಫೇಸಿ ಕೇಸ್ ಇದೆ ಅಂಥ ಸಂದರ್ಭದಲ್ಲಿ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡುತ್ತೇವೆ.

ಮೂಂದೂಡಲ್ಪಟ್ಟಿದ್ದ ಪ್ರಶ್ನೆಗಳು

ಸಂಖ್ಯೆ. ೧೭ (೪೬೨)—ಸದಸ್ಯರು ಇರಲಿಲ್ಲ.
ಸಂಖ್ಯೆ. ೨೬ (೪೧೧)—ಸದಸ್ಯರು ಇರಲಿಲ್ಲ.

ರಾಜ್ಯದಲ್ಲಿರುವ ಕೈಗಾರಿಕಾ ಸಹಕಾರ ಸಂಘಗಳು

೩೮೭. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).— ಮಾನ್ಯ ಕೈಗಾರಿಕಾ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ೧೯೮೭ರ ಅಂತ್ಯದವರೆಗೆ ಇರುವ ಕೈಗಾರಿಕಾ ಸಹಕಾರ ಸಂಘಗಳ ಸಂಖ್ಯೆ ಎಷ್ಟು, ಇವುಗಳಲ್ಲಿ ಮಹಿಳಾ ಸಹಕಾರ ಸಂಘಗಳೆಷ್ಟು ? (ಜಿಲ್ಲಾವಾರು ವಿವರ ನೀಡುವುದು)

ಆ) ಈ ಕೈಗಾರಿಕಾ ಸಹಕಾರ ಸಂಘಗಳಲ್ಲಿ ಎಷ್ಟು ಸಂಘಗಳು ನಷ್ಟದಲ್ಲಿವೆ ? ಹಾಗೂ ಎಷ್ಟು ವರ್ಷಗಳಿಂದ?

ಇ) ಇವುಗಳ ಬಲ ಸಂವರ್ಧನೆಗಾಗಿ ಸರ್ಕಾರವು ಯಾವ ಕಾರ್ಯಕ್ರಮ ಕೈಗೊಂಡಿದೆ ?

ಶ್ರೀ ಆರ್. ಬಿ. ಪೋತ್‌ದಾರ್ (ಕೈಗಾರಿಕೆ ಸಹಕಾರ ಸಚಿವರು).—

ಅ) ರಾಜ್ಯದಲ್ಲಿ ೧೯೮೭ರ ಅಂತ್ಯದವರೆಗೆ ೧೮೮೨ ಕೈಗಾರಿಕಾ ಸಹಕಾರ ಸಂಘಗಳಿರುತ್ತವೆ. ಇವುಗಳ ಪೈಕಿ ೬೧ ಮಹಿಳಾ ಕೈಗಾರಿಕಾ ಸಹಕಾರ ಸಂಘಗಳಿರುತ್ತವೆ. (ಜಿಲ್ಲಾವಾರು ವಿವರಗಳನ್ನು ಲಗತ್ತಿಸಿರುವ ಅನುಬಂಧದಲ್ಲಿ ನೀಡಲಾಗಿದೆ)

ಆ) ಈ ೧೮೮೨ ಕೈಗಾರಿಕಾ ಸಹಕಾರ ಸಂಘಗಳಲ್ಲಿ, ಒಟ್ಟು ೯೪೧ ಸಹಕಾರ ಸಂಘಗಳು ನಷ್ಟದಲ್ಲಿವೆ. ೩ ವರ್ಷಗಳಿಂದ ೧೦ ವರ್ಷಗಳವರೆಗೆ ನಷ್ಟದಲ್ಲಿವೆ. ೬೧ ಮಹಿಳಾ ಕೈಗಾರಿಕಾ ಸಹಕಾರ ಸಂಘಗಳಲ್ಲಿ ೩೪ ಸಹಕಾರ ಸಂಘಗಳು ನಷ್ಟದಲ್ಲಿವೆ.

ಇ) ಈ ಸಹಕಾರ ಸಂಘಗಳ ಬಲ ಸಂವರ್ಧನೆಗಾಗಿ ಪುನರ್ ಸಂಘಟನೆ ಕಾರ್ಯಕ್ರಮವು ಪ್ರಗತಿಯಲ್ಲಿದೆ. ಆರ್ಥಿಕವಾಗಿ ದುರ್ಬಲವಾಗಿರುವ ಸಹಕಾರ ಸಂಘಗಳಿಗೆ ಶೇರು ಬಂಡವಾಳ ಹೂಡಿಕೆ, ಸದಸ್ಯರಿಗೆ ಶೇರು ಬಂಡವಾಳ ಸಾಲ ಮತ್ತು ಸಿಬ್ಬಂದಿ ವೆಚ್ಚದ ನಿರ್ವಹಣೆಗಾಗಿ ಅನುದಾನದ ರೂಪದಲ್ಲಿ ಸರ್ಕಾರದಿಂದ ಧನ ಸಹಾಯ ನೀಡಲಾಗುತ್ತದೆ. ನಬಾರ್ಡ್‌ನವತಿಯಿಂದ ಈ ಸಹಕಾರ ಸಂಘಗಳಿಂದ ಸಂಬಂಧಪಟ್ಟ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಮೂಲಕ ರಿಯಾಯಿತಿ ಬಡ್ಡಿದರದಲ್ಲಿ ದುಡಿಯುವ ಬಂಡವಾಳಕ್ಕಾಗಿ ಸಾಲ ಸೌಲಭ್ಯ ನೀಡಲಾಗುತ್ತಿದೆ.

ANNEXURE

Sl. No. ೦	Name of the District. ೨	Total working I. C. S. ೩	Total No. of women ICS ೪
1.	Karwar	114	19
2.	Bellary	67	2
3.	Tumkur	84	4
4.	Raichur	50	2
5.	Chitradurga	81	2
6.	Belgaum	175	—
7.	Madikeri	9	1
8.	Bijapur	269	—
9.	Shimoga	36	1
10.	Bangalore (Rural)	40	1
11.	Mandya	93	5
12.	Bangalore (Urban)	107	10
13.	Hassan	60	1
14	Kolar	40	—
15.	Bidar	64	2
16.	Mysore	149	3
17.	Mangalore	39	5
18.	Chikmagalore	22	1
19.	Gulbarga	106	2
20.	Dharwad	277	—
	Total	1882	61

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಸಹಕಾರಿ ಕ್ಷೇತ್ರದಲ್ಲಿರುವಂಥ ಕೈಗಾರಿಕೆಗಳಲ್ಲಿ ಸುಮಾರು ೫೦ ಪರ್ಸೆಂಟ್ ನಷ್ಟದಲ್ಲಿವೆ. ಮಹಿಳೆಯರು ನಡೆಸತಕ್ಕ ಕೈಗಾರಿಕೆಗಳು ಸಹ ನಷ್ಟದಲ್ಲಿವೆ. ಹೊಸದಾಗಿ ಹುಟ್ಟುಹಾಕತಕ್ಕಂಥ ಸಹಕಾರ ಕ್ಷೇತ್ರದ ಕೈಗಾರಿಕೆಗಳಿಗೆ ಮೂರು ವರ್ಷದವರೆಗೆ ವರ್ಕಿಂಗ್ ಕ್ಯಾಪಿಟಲ್ ಕೊಡುತ್ತಿದ್ದೀರಿ. ಆದ್ದರಿಂದ ಇವುಗಳಿಗೆ ವಿಶೇಷ ರಿಯಾಯಿತಿ ಕೊಟ್ಟು, ಕೈಗಾರಿಕಾ ಆಕ್ಟ್ ಪ್ರಕಾರ ರಿಜಿಸ್ಟ್ರೇಷನ್ ಮಾಡತಕ್ಕ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಆರ್. ಬಿ. ಪೋತ್‌ದಾರ್.—ನನಗೆ ಹೇಳಿದರೆ ಮಾಡಿಕೊಡುತ್ತೇನೆ.